ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ನೇವಿ-1/ಹೊಗುಅ/168/2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:20.12.2021.

## ಸುತ್ತೋಲೆ

ವಿಷಯ: ಕಛೇರಿ/ಕಾಲೇಜಿನ ದೈನಂದಿನ ಕೆಲಸ-ಕಾರ್ಯಗಳನ್ನು ನಿರ್ವಹಿಸಲು ಡಾಟಾ ಎಂಟ್ರಿ ಆಪರೇಟರ್ ಹಾಗೂ ಗ್ರೂಪ್-ಡಿ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳುವ ಬಗ್ಗೆ.

ಉಲ್ಲೇಖ:
1) ದಿನಾಂಕ:21.04.2014ರ ಸಂಖ್ಯೆ: ಇಡಿ 139 ಯುಇಸಿ 2013ರ ಸರ್ಕಾರಿ ಪತ್ರ.
2) ದಿನಾಂಕ:27.08.2014ರ ಸಂಖ್ಯೆ: ಇಡಿ 172 ಯುಇಸಿ 2014ರ ಸರ್ಕಾರಿ ಪತ್ರ.
3) ದಿನಾಂಕ:21.05.2019ರ ಸಂಖ್ಯೆ: ಇಡಿ 116 ಯುಇಸಿ 2016ರ ಸರ್ಕಾರಿ ಪತ್ರ.
4) ದಿನಾಂಕ:14.03.2018ರ ಸಂಖ್ಯೆ:ಕಾಶಿಇ/425/ಗ್ರೂಪ್-ಡಿ/2017-18/ನೇವಿ-1, ಈ ಕಛೇರಿಯ ಸುತ್ತೋಲೆ
5) ದಿನಾಂಕ:29.07.2021ರ ಸಂಖ್ಯೆ:ಕಾಶಿಇ/ಆಯವ್ಯಯ/10/ಹೊ.ಗು.ಅ/2021-22, ಈ ಕಛೇರಿಯ ತಿದ್ದುಪಡಿ ಆದೇಶ.
6) ದಿನಾಂಕ:20/09/2021 ರ ಈ ಕಛೇರಿಯ ಇ-ಟೆಂಡರ್ ಸಂಖ್ಯೆ: ಡಿಸಿಇ/2021-22/ ಐಎನ್‌ಡಿ/1501.
7) ದಿನಾಂಕ: .12.2021ರ ಸಂಖ್ಯೆ: DCE/APT1/OS/1/2021-DCE-Appt 1, ಈ ಕಛೇರಿಯ ಕಾರ್ಯಾದೇಶ.

* * * * * * * * * *

ಕಾಲೇಜಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ದೈನಂದಿನ ಕೆಲಸ-ಕಾರ್ಯಗಳನ್ನು ನಿರ್ವಹಿಸಲು ಸರ್ಕಾರದ ನಿರ್ದೇಶನದನ್ವಯ ಗ್ರೂಪ್-ಡಿ ಕೊರತೆಯಿರುವ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅನ್‌ಸ್ಕಿಲ್ಡ್/ಅರೆಕಾಲಿಕ ನೌಕರರ ಸೇವೆಯನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳಲಾಗುತ್ತಿತ್ತು. ಆದರೆ, ಸರ್ಕಾರದ ಆದೇಶ ಸಂಖ್ಯೆ:ಆಇ/03/ಟಿಎಫ್‌ಪಿ/2017, ದಿನಾಂಕ:07.07.2017 ರಲ್ಲಿ ಸಂಚಿತ ಸಂಭಾವನೆಯ ಆಧಾರದ ಮೇಲೆ ಬಳಸಿಕೊಳ್ಳಲಾಗುತ್ತಿದ್ದ ಎಲ್ಲಾ ಅನ್‌ಸ್ಕಿಲ್ಡ್ ನೌಕರರ ಸೇವೆಯನ್ನು ಅವರುಗಳ ನೇಮಕಾತಿ ಅವಧಿ ಪೂರೈಸಿದ ತಕ್ಷಣ ಬರಖಾಸ್ತು/ ಮುಕ್ತಾಯ ಮಾಡತಕ್ಕದ್ದು ಎಂಬುದಾಗಿ ಆದೇಶಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಾಲೇಜಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ದೈನಂದಿನ ಕೆಲಸ-ಕಾರ್ಯಗಳನ್ನು ನಿರ್ವಹಿಸಲು ಉಲ್ಲೇಖ-(1) & (2) ರ ಪತ್ರದಲ್ಲಿ ಸರ್ಕಾರವು ನೀಡಿದ ಅನುಮತಿಯಂತೆ ಕಾಲೇಜುಗಳಲ್ಲಿ ಖಾಲಿ ಇರುವ ಗ್ರೂಪ್-ಡಿ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲು ಉಲ್ಲೇಖ-(4) ರ ಈ ಕಛೇರಿಯ ಸುತ್ತೋಲೆಯಲ್ಲಿ ಪ್ರಾಂಶುಪಾಲರಿಗೆ ಅನುಮತಿ ನೀಡಲಾಗಿತ್ತು. ಅದರಂತೆ, ಕೆಲವು ಕಾಲೇಜುಗಳಲ್ಲಿ ಅಗತ್ಯವಿದ್ದ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲಾಗಿದೆ.

ಸರ್ಕಾರವು ಅನುಮತಿ ನೀಡಿರುವಂತೆ, ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯವಿರುವ 102 ಡಾಟಾ ಎಂಟ್ರಿ ಆಪರೇಟರ್ ಮತ್ತು 347 ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಒದಗಿಸಲು, ಉಲ್ಲೇಖ-(6) ರಂತೆ ಆಹ್ವಾನಿಸಲಾಗಿದ್ದ ಇ-ಟೆಂಡರ್‌ನಲ್ಲಿ ಭಾಗವಹಿಸಿ, ಅಂಗೀಕೃತಗೊಂಡ ಮೆ||ಜೆಮಿನಿ ಸೆಕ್ಯೂರಿಟಿ ಮತ್ತು ಅಲೈಡ್ ಸರ್ವಿಸಸ್, ದಾವಣಗೆರೆ ಈ ಸಂಸ್ಥೆಗೆ ಉಲ್ಲೇಖ-(7) ರಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಕಾರ್ಯಾದೇಶ ನೀಡಲಾಗಿದೆ.

.....2

ಈ ಹಿನ್ನೆಲೆಯಲ್ಲಿ, ಕೆಲವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಬಳಸಿಕೊಳ್ಳಲಾಗಿದ್ದ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಆಗಸ್ಟ-2021 ರವರೆಗೆ ಮಾತ್ರ ಬಳಸಿಕೊಳ್ಳಲು ಈಗಾಗಲೇ ಉಲ್ಲೇಖ-(5) ರ ತಿದ್ದುಪಡಿ ಆದೇಶದಲ್ಲಿ ಸೂಚಿಸಲಾಗಿದ್ದು, ಉಲ್ಲೇಖ-(4)ರ ಸುತ್ತೋಲೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ. ಇನ್ನು ಮುಂದೆ ಕಛೇರಿ/ಕಾಲೇಜುಗಳಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್‌ಗಳು ಹಾಗೂ ಗ್ರೂಪ್-ಡಿ ಸಿಬ್ಬಂದಿಗಳ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡುವವರೆಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪ್ರಾಂಶುಪಾಲರುಗಳು ತಮ್ಮ ಹಂತದಲ್ಲಿ ಯಾವುದೇ ರೀತಿಯ ಗುತ್ತಿಗೆ / ಹೊರ ಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್‌ಗಳ ಹಾಗೂ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ನೇರ ಅಥವಾ ಹೊರ ಸಂಪನ್ಮೂಲ ಏಜೆನ್ಸಿಗಳಿಂದ ಪಡೆಯುವುದನ್ನು ನಿರ್ಬಂಧಿಸಲಾಗಿದೆ.

ಇದನ್ನೂ ಮೀರಿ, ಅಧೀನ ಕಛೇರಿ/ಕಾಲೇಜಿನ ಹಂತದಲ್ಲಿ ಯಾವುದೇ ರೀತಿಯ ಗುತ್ತಿಗೆ / ಹೊರ ಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್‌ಗಳ ಹಾಗೂ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ನೇರ ಅಥವಾ ಹೊರ ಸಂಪನ್ಮೂಲ ಏಜೆನ್ಸಿಗಳಿಂದ ಪಡೆದಲ್ಲಿ ಅದಕ್ಕೆ ತಗಲುವ ಆರ್ಥಿಕ ವೆಚ್ಚವನ್ನು ಕೇಂದ್ರ ಕಛೇರಿಯಿಂದ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ.

ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ 102 ಡಾಟಾ ಎಂಟ್ರಿ ಆಪರೇಟರ್ ಮತ್ತು 347 ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಒದಗಿಸುವಂತೆ ಉಲ್ಲೇಖ-(7) ರನ್ವಯ ಮೆ||ಜೆಮಿನಿ ಸೆಕ್ಯೂರಿಟಿ ಮತ್ತು ಅಲೈಡ್ ಸರ್ವಿಸಸ್, ದಾವಣಗೆರೆ ಇವರಿಗೆ ಕಾರ್ಯಾದೇಶ ನೀಡಲಾಗಿರುವುದರಿಂದ ಸದರಿ ಸಂಸ್ಥೆಯಿಂದ ಡಾಟಾ ಎಂಟ್ರಿ ಆಪರೇಟರ್ ಮತ್ತು ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಪೂರ್ವದಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ.

1) ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯು ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ 12 ತಿಂಗಳು ಅಥವಾ ಕೇಂದ್ರ ಕಛೇರಿಯಿಂದ ಭವಿಷ್ಯತ್ತಿನಲ್ಲಿ ನೀಡುವ ನಿರ್ದೇಶನದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ.

2) ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಮೊದಲು ಸಿಬ್ಬಂದಿಗಳು ಈ ಕೆಳಗಿನಂತೆ ನಿಗಧಿಪಡಿಸಿದ ವಿದ್ಯಾರ್ಹತೆ ಪೂರೈಸಿರುವ ಬಗ್ಗೆ ಖಾತ್ರಿಪಡಿಸಿಕೊಂಡು, ಸಮರ್ಪಕವಾಗಿದ್ದಲ್ಲಿ ಮಾತ್ರ ಆಯ್ಕೆ ಮಾಡಿಕೊಳ್ಳುವುದು.

| ಕ್ರ. ಸಂ. | ಸಿಬ್ಬಂದಿಗಳು | ವಿದ್ಯಾರ್ಹತೆ |
|---|---|---|
| 1. | ಡಾಟಾ ಎಂಟ್ರಿ ಆಪರೇಟರ್ | ಪಿ.ಯು.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆ ಯೊಂದಿಗೆ ಕಂಪ್ಯೂಟರ್ ಜ್ಞಾನ ಹೊಂದಿದ್ದು, Google Workspace, MS-word, MS-excel, Power Point, Internet-Browsing, Nudi Software ಗೊತ್ತಿರಬೇಕು ಹಾಗೂ ಕನ್ನಡ & ಆಂಗ್ಲ ಭಾಷೆಯಲ್ಲಿ ಉತ್ತಮ ವೇಗದೊಂದಿಗೆ ಬೆರಳಚ್ಚಿಸುವ ಸಾಮರ್ಥ್ಯ ಹೊಂದಿರಬೇಕು. ಇದರೊಂದಿಗೆ ಕನಿಷ್ಠ 01 ವರ್ಷದ ಅನುಭವ ಹೊಂದಿರಬೇಕು. |
| 2. | ಗ್ರೂಪ್-ಡಿ | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆ ಯೊಂದಿಗೆ ಕನ್ನಡ ಭಾಷೆಯನ್ನು ಓದುವ ಮತ್ತು ಬರೆಯುವ ಜ್ಞಾನ ಹೊಂದಿರಬೇಕು. |

....3

3) ಹೊರಗುತ್ತಿಗೆ ಸಿಬ್ಬಂದಿಗಳು ಬಾಹ್ಯ ಸಂಪನ್ಮೂಲದ ಮುಖಾಂತರ ಸೇವೆ ಸಲ್ಲಿಸುತ್ತಿರುವುದರಿಂದ ಸದರಿ ಸಿಬ್ಬಂದಿಗಳು ಖಾಯಂ ಸರ್ಕಾರಿ ಸೇವೆಗೆ ಅರ್ಹರಾಗುವುದಿಲ್ಲವೆಂದು ತಿಳಿಸುವುದು.

4) ಕಛೇರಿ/ಕಾಲೇಜುಗಳಿಗೆ ಒದಗಿಸಿರುವ ಹೊರಗುತ್ತಿಗೆ ನೌಕರರ ವೇತನದ ಮೊತ್ತವನ್ನು ಪ್ರತಿ ತಿಂಗಳು ಕೇಂದ್ರ ಕಛೇರಿಯಿಂದ ಸಂಬಂಧಿಸಿದ ಜಂಟಿ ನಿರ್ದೇಶಕರ ಕಛೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಬಿಡುಗಡೆ ಮಾಡಲಾಗುವುದು.

5) ಹೊರಗುತ್ತಿಗೆ ನೌಕರರ ವೇತನ ಪಾವತಿಗೆ ಸಂಬಂಧಿಸಿದಂತೆ; ಪ್ರತ್ಯೇಕವಾಗಿ ನಿರ್ವಹಿಸಿದ ಹೊರಗುತ್ತಿಗೆ ಸಿಬ್ಬಂದಿಗಳ ಆಯಾ ತಿಂಗಳ ದೃಢೀಕೃತ ಹಾಜರಾತಿ (Hard copy) ವಹಿಯನ್ನು pdf format ನಲ್ಲಿ ಸಿದ್ದಪಡಿಸಿ, ಆಯಾ ತಿಂಗಳ ಕೊನೆಯ ದಿನಾಂಕದಂದು ಏಜೆನ್ಸಿಯ ಇ-ಮೇಲ್ ಐ.ಡಿ. geminisec777dwd@gmail.com ಗೆ ಕಳುಹಿಸಿಕೊಡುವುದು. ಸದರಿ ಹಾಜರಾತಿಯನ್ವಯ ಏಜೆನ್ಸಿಯಿಂದ ಪ್ರತ್ಯೇಕವಾಗಿ ತ್ರಿಪ್ರತಿಯಲ್ಲಿ ಬಿಲ್ಲುಗಳನ್ನು ಹಿಂದಿನ ಮಾಹೆಯ ಪಾವತಿಗೆ ಸಂಬಂಧಿಸಿದ ಇ.ಪಿ.ಎಫ್. / ಇ.ಎಸ್.ಐ / ವೃತ್ತಿ ತೆರಿಗೆ / ಸೇವಾ ತೆರಿಗೆಗಳ ಕಡಿತಗೊಳಿಸಿದ ಹಣವನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಜಮಾ ಮಾಡಿದ ದೃಢೀಕೃತ ಚಲನ್ ಪ್ರತಿಗಳೊಂದಿಗೆ ಪ್ರತಿ ತಿಂಗಳು 5 ನೇ ತಾರೀಖಿನೊಳಗಾಗಿ ಪಡೆದು, ನಂತರ ಸಂಬಂಧಪಟ್ಟ ಸಿಬ್ಬಂದಿಗಳ ವೇತನವನ್ನು ನಿಯಮಾನುಸಾರ ಏಜೆನ್ಸಿಗೆ ಪಾವತಿಸುವುದು.

6) ಹೊರಗುತ್ತಿಗೆ ನೌಕರರ ವೇತನ ಪಾವತಿಗೆ ಸಂಬಂಧಿಸಿದಂತೆ ಕೇಂದ್ರ ಕಛೇರಿಯಿಂದ ಬಿಡುಗಡೆ ಮಾಡಲಾದ ಅನುದಾನವು ವ್ಯಪಗತವಾದಲ್ಲಿ ಸಂಬಂಧಪಟ್ಟ ಕಛೇರಿ/ಕಾಲೇಜಿನ ಮುಖ್ಯಸ್ಥರೇ ನೇರ ಹೊಣೆಗಾರರಾಗಿರುತ್ತಾರೆ.

7) ಬಾಹ್ಯ ಸಂಪನ್ಮೂಲದಿಂದ ಪೂರೈಸಲ್ಪಟ್ಟ ಸಿಬ್ಬಂದಿಗಳು ಹಾಲಿ ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿ/ಸಿಬ್ಬಂದಿಯವರೊಂದಿಗೆ ಕರ್ತವ್ಯ ನಿರ್ವಹಿಸುವುದು. ಸದರಿ ಬಾಹ್ಯ ಸಂಪನ್ಮೂಲ ಸಿಬ್ಬಂದಿಗಳ ವಿರುದ್ಧ ಯಾವುದೇ ರೀತಿಯ ಆರೋಪ/ದುರ್ನಡತೆ ಕಂಡುಬಂದಲ್ಲಿ ಕೂಡಲೇ ಈ ಕಛೇರಿಗೆ ಹಾಗೂ ಬಾಹ್ಯ ಸಂಪನ್ಮೂಲ ಏಜೆನ್ಸಿಗೆ ತಿಳಿಸುವುದು.

8) ಹೊರ ಸಂಪನ್ಮೂಲ ಸಿಬ್ಬಂದಿ ವರ್ಗದವರು ಪ್ರತಿ ತಿಂಗಳು 01 ದಿನ ಮಾತ್ರ ಸಾಂದರ್ಭಿಕ ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ ಹಾಗೂ ಸಾರ್ವಜನಿಕ ರಜೆ ಪಡೆಯಲು ಸಹ ಅರ್ಹರಿರುತ್ತಾರೆ. ಆದರೆ, ಲಭ್ಯವಿರುವ ರಜೆ ಅವಧಿಯನ್ನೂ ಮೀರಿ ಗೈರು ಹಾಜರಾದಲ್ಲಿ/ರಜೆ ಪಡೆದಲ್ಲಿ ಗೈರು ಹಾಜರಾದ/ರಜೆ ಪಡೆದ ಅವಧಿಯ ವೇತನವನ್ನು ಕಡಿತಗೊಳಿಸುವುದು. ಒಂದು ವೇಳೆ ನಿರಂತರವಾಗಿ 15 ದಿನಗಳಿಗಿಂತ ಹೆಚ್ಚಿನ ಅವಧಿಗೆ ಗೈರು ಹಾಜರಾದಲ್ಲಿ / ರಜೆ ಪಡೆದಲ್ಲಿ ಬದಲಿ ಸಿಬ್ಬಂದಿಯ ವ್ಯವಸ್ಥೆಯನ್ನು ಮಾಡುವಂತೆ ಟೆಂಡರ್‌ದಾರರಿಗೆ ಮನವಿ ಸಲ್ಲಿಸಬಹುದಾಗಿದೆ.

9) ಹೊರಗುತ್ತಿಗೆ ಸಿಬ್ಬಂದಿಗಳು ಕಛೇರಿ/ಕಾಲೇಜಿನ ಕರ್ತವ್ಯದ ಅವಧಿಯಲ್ಲಿ ಕಡ್ಡಾಯವಾಗಿ ಹಾಜರಿರುವಂತೆ ಹಾಗೂ ಸೂಚಿಸಿದ ಕೆಲಸಗಳನ್ನು ಜವಾಬ್ದಾರಿಯುತವಾಗಿ ಹಾಗೂ ಸಮರ್ಪಕವಾಗಿ ನಿರ್ವಹಿಸಲು ಸೂಕ್ತ ಮಾರ್ಗದರ್ಶನ ನೀಡುವುದು.

....4

10) ಹೊರಗುತ್ತಿಗೆ ಸಿಬ್ಬಂದಿಗಳಿಗೆ ನಿಗಧಿಪಡಿಸಿದ ಕಛೇರಿ/ಕಾಲೇಜಿನ ಕೆಲಸ ಕಾರ್ಯಗಳನ್ನು ಹೊರತುಪಡಿಸಿ, ಶೌಚಾಲಯ ಸ್ವಚ್ಛತೆ, ಸ್ವಂತ ಕೆಲಸ ಇತ್ಯಾದಿ ಕೆಲಸಗಳಿಗೆ ಹಂಚಿಕೆ ಮಾಡದಂತೆ ನೋಡಿಕೊಳ್ಳುವುದು.

ಆಯುಕ್ತರು
ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ

**ಇವರಿಗೆ:**

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2) ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ

**ಪ್ರತಿಯನ್ನು:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ಮಾಹಿತಿಗಾಗಿ
2) ಶ್ರೀ.ಬಿ.ಎಸ್.ರಾಜಶೇಖರ್ ಬಿನ್ ಶ್ರೀ ಸಣ್ಣಬಸಪ್ಪ ಮಾಲೀಕರು, ಮೆ|| ಜೆಮಿನಿ ಸೆಕ್ಯೂರಿಟಿ ಮತ್ತು ಅಲೈಡ್ ಸರ್ವಿಸಸ್, #2345/6, 5ನೇ ಕ್ರಾಸ್, ಹೆಚ್.ಕೆ.ಆರ್. ಸರ್ಕಲ್ ಹತ್ತಿರ, ನಿಟ್ಟುವಳ್ಳಿ ಹೊಸ ಬಡಾವಣೆ, ದಾವಣಗೆರೆ – 577 004.
3) ಕಛೇರಿ ಪ್ರತಿ

## ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:DCE/APT1/OS/1/2021-DCE-Appt 1
(Computer No.453975)

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:20.12.2021.

## ಕಾರ್ಯಾದೇಶ

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಡಾಟಾ ಎಂಟ್ರಿ ಆಪರೇಟರ್‌ಗಳು ಹಾಗೂ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಕಾರ್ಯಾದೇಶ ನೀಡುವ ಬಗ್ಗೆ.

ಉಲ್ಲೇಖ: 1) ದಿನಾಂಕ:21.04.2014ರ ಸಂಖ್ಯೆ: ಇಡಿ 139 ಯುಇಸಿ 2013ರ ಸರ್ಕಾರಿ ಪತ್ರ.
2) ದಿನಾಂಕ:27.08.2014ರ ಸಂಖ್ಯೆ: ಇಡಿ 172 ಯುಇಸಿ 2014ರ ಸರ್ಕಾರಿ ಪತ್ರ.
3) ದಿನಾಂಕ:21.05.2019ರ ಸಂಖ್ಯೆ: ಇಡಿ 116 ಯುಇಸಿ 2016ರ ಸರ್ಕಾರಿ ಪತ್ರ.
4) ದಿನಾಂಕ:20/09/2021 ರ ಈ ಕಛೇರಿಯ ಇ-ಟೆಂಡರ್ ಸಂಖ್ಯೆ: ಡಿಸಿಇ/2021-22/ಐಎನ್‌ಡಿ/1501.
5) ದಿನಾಂಕ:14.12.2021ರ ಈ ಕಛೇರಿ ಸಮಸಂಖ್ಯೆಯ Letter of Intent. (LOI)
6) ದಿನಾಂಕ:15.12.2021ರ ಮೆ||ಜೆಮಿನಿ ಸೆಕ್ಯೂರಿಟಿ ಮತ್ತು ಅಲೈಡ್ ಸರ್ವಿಸಸ್ ಇವರ ಪತ್ರ ಸಂಖ್ಯೆ ಜಿಎಸ್‌ಎಸ್/ಡಿವಿಜಿ/ಬಿಎನ್‌ಜಿ/169/2021-22.

* * * * * * * * * *

ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅವಶ್ಯವಿರುವ 102 ಡಾಟಾ ಎಂಟ್ರಿ ಆಪರೇಟರ್ ಮತ್ತು 347 ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಬಳಸಿಕೊಳ್ಳಲು ಸರ್ಕಾರವು ಅನುಮತಿ ನೀಡಿರುವ ಪ್ರಯುಕ್ತ ಉಲ್ಲೇಖ-(4)ರಂತೆ ಇ-ಟೆಂಡರ್ ಪ್ರಕಟಣೆಯನ್ನು ನೀಡಿ, ಆಸಕ್ತ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿತ್ತು. ಸದರಿ ಇ-ಟೆಂಡರ್ ನಲ್ಲಿ ಭಾಗವಹಿಸಿದ್ದ ಮೆ||ಜೆಮಿನಿ ಸೆಕ್ಯೂರಿಟಿ ಮತ್ತು ಅಲೈಡ್ ಸರ್ವಿಸಸ್ ಸಂಸ್ಥೆಯ ತಾಂತ್ರಿಕ ಮತ್ತು ಫೈನಾಷಿಯಲ್ ಬಿಡ್‌ನ್ನು ಇಲಾಖಾ ಆಂತರಿಕ ಟೆಂಡರ್ ಪರಿಶೀಲನಾ ಸಮಿತಿಯು ಅಂಗೀಕರಿಸಿರುವುದರಿಂದ ಟೆಂಡರ್‌ನಲ್ಲಿನ ಷರತ್ತುಗಳನ್ವಯ ರೂ.19.20 ಲಕ್ಷ (ರೂಪಾಯಿ ಹತ್ತೊಂಬತ್ತು ಲಕ್ಷದ ಇಪ್ಪತ್ತು ಸಾವಿರ ಮಾತ್ರ) ಕಾರ್ಯಾಧಾರಿತ ಭದ್ರತೆಗೆ ಬ್ಯಾಂಕ್ ಗ್ಯಾರಂಟಿ ಮತ್ತು ಕರಾರು ಒಪ್ಪಂದವನ್ನು ಛಾಪಾ ಕಾಗದದಲ್ಲಿ ದೃಢೀಕರಿಸಿ, ಸಲ್ಲಿಸುವಂತೆ ಉಲ್ಲೇಖ-(5)ರ ಈ ಕಛೇರಿ ಪತ್ರದಲ್ಲಿ ಸೂಚಿಸಲಾಗಿತ್ತು. ಅದರಂತೆ, ಉಲ್ಲೇಖ-(6)ರಲ್ಲಿ ಮೆ||ಜೆಮಿನಿ ಸೆಕ್ಯೂರಿಟಿ ಮತ್ತು ಅಲೈಡ್ ಸರ್ವಿಸಸ್ ಸಂಸ್ಥೆಯ ವತಿಯಿಂದ ರೂ.19.20 ಲಕ್ಷ ರೂಪಾಯಿಗಳ (ಹತ್ತೊಂಬತ್ತು ಲಕ್ಷದ ಇಪ್ಪತ್ತು ಸಾವಿರ ಮಾತ್ರ) ಬ್ಯಾಂಕ್ ಗ್ಯಾರಂಟಿ ಮತ್ತು ರೂ.200/-ಗಳ ಛಾಪಾ ಕಾಗದದಲ್ಲಿ ಕರಾರು ಒಪ್ಪಂದವನ್ನು ದೃಢೀಕರಿಸಿ, ಸಲ್ಲಿಸಲಾಗಿರುತ್ತದೆ.

ಆದ್ದರಿಂದ, ಇ-ಟೆಂಡರ್‌ನಲ್ಲಿ ನಮೂದಿಸಿರುವ ಮತ್ತು ಅಂಗೀಕರಿಸಲಾದ ದರಪಟ್ಟಿಯನ್ವಯ 102 ಡಾಟಾ ಎಂಟ್ರಿ ಆಪರೇಟರ್ ಮತ್ತು 347 ಗ್ರೂಪ್-ಡಿ ಹುದ್ದೆಗಳಿಗೆ ಹೊರ ಸಂಪನ್ಮೂಲ ಸಿಬ್ಬಂದಿಗಳ ಸೇವೆಯನ್ನು ಅನುಬಂಧ-1 & 2 ರಲ್ಲಿ ಸೂಚಿಸಿರುವ ಕಛೇರಿ/ಕಾಲೇಜುಗಳಿಗೆ ಶೇಕಡ 1.0 ರ ಸೇವಾ ವೆಚ್ಚದಲ್ಲಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಒದಗಿಸಲು ಜೆಮಿನಿ ಸೆಕ್ಯೂರಿಟಿ ಮತ್ತು ಅಲೈಡ್ ಸರ್ವಿಸಸ್, ದಾವಣಗೆರೆ ಇವರಿಗೆ ಕಾರ್ಯಾದೇಶ ನೀಡಲಾಗಿದೆ.

.....2

<u>ಷರತ್ತುಗಳು:</u>

1) ಈ ಕಾರ್ಯಾದೇಶದ ಒಪ್ಪಂದವು ದಿನಾಂಕ:20.12.2021 ರಿಂದ ಜಾರಿಗೆ ಬರುತ್ತದೆ. ಈ ಕಾರ್ಯಾದೇಶದ ಅವಧಿಯು ದಿನಾಂಕ:20.12.2021 ರಿಂದ ದಿನಾಂಕ:19.12.2022 ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

2) ಟೆಂಡರ್ದಾರರು ಟೆಂಡರ್ ಷೆಡ್ಯೂಲ್‌ನಲ್ಲಿ ನಮೂದಿಸಿರುವಂತೆ ಕಾಲೇಜು ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿಗಳು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಇಲಾಖೆ ಸೂಚಿಸುವ ಅವಧಿಯವರೆಗೆ 102 ಡಾಟಾ ಎಂಟ್ರಿ ಆಪರೇಟರ್ ಮತ್ತು 347 ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಒದಗಿಸಬೇಕು.

3) ಡಾಟಾ ಎಂಟ್ರಿ ಆಪರೇಟರ್ ಮತ್ತು ಗ್ರೂಪ್-ಡಿ ಸಿಬ್ಬಂದಿಗಳನ್ನು ಒದಗಿಸುವಾಗ ಟೆಂಡರ್‌ನಲ್ಲಿ ನಮೂದಿಸಿರುವಂತೆ ನಿಗದಿಪಡಿಸಿರುವ ವಿದ್ಯಾರ್ಹತೆ/ಅನುಭವ ಹೊಂದಿರುವವರನ್ನೇ ಒದಗಿಸಬೇಕು.

4) ಸೇವಾ ಸಿಬ್ಬಂದಿಗಳಿಗೆ ಏಜೆನ್ಸಿ ಮೂಲಕ ಆನ್‌ಲೈನ್/ಆರ್.ಟಿ.ಜಿ.ಎಸ್. ಮುಖಾಂತರ ಪ್ರತಿ ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ತಪ್ಪದೇ ವೇತನ ಪಾವತಿಸಬೇಕು. ವಿವಿಧ ವಂತಿಕೆಗಳ ಕಡಿತಗಳನ್ನು ಮಾಡಿದ ಬಗ್ಗೆ ನೌಕರರಿಗೆ ಪ್ರತಿ ತಿಂಗಳಿಗೊಮ್ಮೆ ಸಂಬಂಧಪಟ್ಟ ಪ್ರಾಧಿಕಾರದಿಂದ ಸ್ಟೇಟ್‌ಮೆಂಟ್ ವಿವರ/ಮಾಹಿತಿ ಪಡೆದು ಸಂಬಂಧಿಸಿದ ನೌಕರರಿಗೆ ನೀಡಬೇಕು.

5) ಕಾಲೇಜು/ಕಛೇರಿಗಳಿಗೆ ಒದಗಿಸಿರುವ ಹೊರಗುತ್ತಿಗೆ ನೌಕರರ ವೇತನ ಪಾವತಿಗೆ ಸಂಬಂಧಿಸಿದಂತೆ ಆಯಾ ಕಾಲೇಜು/ಕಛೇರಿಗಳಿಂದ ಪ್ರತಿ ಮಾಹೆಯ ಕೊನೆಯ ದಿನಾಂಕದಂದು ದೃಢೀಕೃತ ಹಾಜರಾತಿ ವಹಿಯನ್ನು ಪಡೆದು, ಸದರಿ ಹಾಜರಾತಿಯನ್ವಯ ಪ್ರತ್ಯೇಕವಾಗಿ ತ್ರಿಪ್ರತಿಯಲ್ಲಿ ಬಿಲ್ಲುಗಳನ್ನು ಹಾಗೂ ಹಿಂದಿನ ಮಾಹೆಯ ಪಾವತಿಗೆ ಸಂಬಂಧಿಸಿದಂತೆ ಇ.ಪಿ.ಎಫ್. / ಇ.ಎಸ್.ಐ / ವೃತ್ತಿ ತೆರಿಗೆ / ಸೇವಾ ತೆರಿಗೆಗಳ ಕಡಿತಗೊಳಿಸಿದ ಹಣವನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಜಮಾ ಮಾಡಿದ ಚಲನ್ ಪ್ರತಿಗಳೊಂದಿಗೆ ಪ್ರತಿ ತಿಂಗಳು 5 ನೇ ತಾರೀಖಿನೊಳಗಾಗಿ ಸಂಬಂಧಿಸಿದ ಕಛೇರಿ/ಕಾಲೇಜುಗಳ ಮುಖ್ಯಸ್ಥರಿಗೆ ಸಲ್ಲಿಸುವುದು.

6) ನಿಯೋಜಿತ ಪ್ರತಿಯೊಬ್ಬ ಸಿಬ್ಬಂದಿಯ ಹೆಸರಿನಲ್ಲಿ ಇ.ಪಿ.ಎಫ್ ಮತ್ತು ಇ.ಎಸ್.ಐ. ಖಾತೆಗಳನ್ನು ತೆರೆದು, ಆ ಖಾತೆಗಳಲ್ಲಿ ಸಿಬ್ಬಂದಿಯ ವಂತಿಕೆ ಭಾಗದ ಹಣ ಮತ್ತು ಎಂಪ್ಲಾಯರ್ ವಂತಿಕೆ ಭಾಗದ ಹಣವನ್ನು ಟೆಂಡರ್ ಪಡೆದ ಸಂಸ್ಥೆಯವರು ತಪ್ಪದೆ ಜಮೆ ಮಾಡುವುದು. ಇ.ಪಿ.ಎಫ್. / ಇ.ಎಸ್.ಐ / ವೃತ್ತಿ ತೆರಿಗೆ / ಸೇವಾ ತೆರಿಗೆಗಳ ಕಡಿತಗೊಳಿಸಿದ ಹಣವನ್ನು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಜಮಾ ಮಾಡಿದ ಚಲನ್ ಪ್ರತಿಗಳನ್ನು ಕಡ್ಡಾಯವಾಗಿ ಪ್ರಾಂಶುಪಾಲರಿಗೆ ಸಲ್ಲಿಸಬೇಕು ಹಾಗೂ ಸಿಬ್ಬಂದಿಯ ಪ್ರತಿ ಮಾಹೆಯ ಮೊಬಲಗಿನ ವಿವರಗಳನ್ನು ಕೂಡಾ ಪ್ರಾಂಶುಪಾಲರಿಗೆ ಸಲ್ಲಿಸತಕ್ಕದ್ದು. ಇದರ ಕಛೇರಿ/ ಕಾಲೇಜುವಾರು ಕ್ರೋಢೀಕೃತ ವಿವರಗಳನ್ನು ಮಾಹಿತಿಗಾಗಿ ಕೇಂದ್ರ ಕಛೇರಿಗೆ ಸಲ್ಲಿಸುವುದು.

.....3

7) ಪ್ರತಿಯೊಬ್ಬ ಸಿಬ್ಬಂದಿಯ ಇ.ಪಿ.ಎಫ್. ಮತ್ತು ಇ.ಎಸ್.ಐ ಖಾತೆಯನ್ನು ಎರಡು ತಿಂಗಳ ಅವಧಿಯೊಳಗೆ ತೆರೆಯಬೇಕು. ಒಂದು ವೇಳೆ ಖಾತೆ ತೆರಯದಿದ್ದಲ್ಲಿ ಇದು ಟೆಂಡರ್ ನಿಬಂಧನೆಯ ಉಲ್ಲಂಘನೆ ಎಂದು ಪರಿಗಣಿಸಿ ಟೆಂಡರ್ ರದ್ದುಪಡಿಸಲಾಗುವುದು. ಹಾಗೂ ಈ ಖಾತೆಗಳನ್ನು ತೆರೆಯುವವರೆಗಿನ ಅವಧಿಯಲ್ಲಿ ನಿಯೋಜಿತ ಯಾವುದೇ ನೌಕರರ ವಂತಿಕೆ ಕಡಿತ ಮಾಡಬಾರದು. ವೈಯಕ್ತಿಕ ಖಾತೆ ತೆರೆಯುವವರೆಗೆ ವಂತಿಕೆ ನೀಡಲಾಗುವುದಿಲ್ಲ. ಈಗಾಗಲೇ ಸಿಬ್ಬಂದಿಯವರು ಇ.ಪಿ.ಎಫ್. ಮತ್ತು ಇ.ಎಸ್.ಐ ಖಾತೆಯನ್ನು ಹೊಂದಿದ್ದಲ್ಲಿ ನಿಯಮಾನುಸಾರ ಖಾತೆಗೆ ಜಮೆ ಮಾಡಲು ಕ್ರಮ ಕೈಗೊಳ್ಳಬೇಕು.

8) ಇ.ಪಿ.ಎಫ್. / ಇ.ಎಸ್.ಐ / ವೃತ್ತಿ ತೆರಿಗೆ / ಸೇವಾ ತೆರಿಗೆಗಳ ಕಡಿತಗಳನ್ನು ನಿಯಮಾನುಸಾರ ನಿಯೋಜಿತ ಸಿಬ್ಬಂದಿಯ ವಂತಿಕೆಯಿಂದ ಕಟಾವು ಮಾಡಿ ಅವುಗಳನ್ನು ಸಕಾಲದಲ್ಲಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಜಮಾ ಮಾಡಬೇಕು. ಒಂದು ವೇಳೆ ಸದರಿ ವಂತಿಕೆಯನ್ನು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಜಮಾ ಮಾಡದಿದ್ದಲ್ಲಿ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಮತ್ತು ಈ ಹಣ ದುರುಪಯೋಗವಾದಲ್ಲಿ ಟೆಂಡರ್‌ದಾರರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಹಾಗೂ ಸಂಸ್ಥೆಯನ್ನು ಕಪ್ಪುಪಟ್ಟಿಗೆ (Black List) ಸೇರಿಸುವ ಬಗ್ಗೆ ಶಿಫಾರಸ್ಸು ಮಾಡಲು ಇಲಾಖೆಯು ಹಕ್ಕುಳ್ಳದ್ದಾಗಿರುತ್ತದೆ.

9) ಟೆಂಡರ್ ನಿಯಮಗಳನ್ವಯ ಕಛೇರಿ/ಕಾಲೇಜುಗಳ ಮುಖ್ಯಸ್ಥರು ಹೊರಗುತ್ತಿಗೆ ಸಿಬ್ಬಂದಿಗಳ ವೇತನವನ್ನು ಸಂಬಂಧಪಟ್ಟ ಸೇವಾ ಏಜೆನ್ಸಿಗೆ ಪಾವತಿಸುವ ಸಂಬಂಧ ನಿಗಧಿಪಡಿಸಿದ ಮೊತ್ತವನ್ನು ಪ್ರತಿ ತಿಂಗಳು ಕೇಂದ್ರ ಕಛೇರಿಯಿಂದ ಅಧೀನ ಕಛೇರಿ/ಕಾಲೇಜುಗಳಿಗೆ ಬಿಡುಗಡೆ ಮಾಡಲಾಗುವುದು. ಸೇವಾ ಏಜೆನ್ಸಿಯು ಬಿಲ್ಲುಗಳನ್ನು ನೇರವಾಗಿ ಸಂಬಂಧಿಸಿದ ಕಛೇರಿ/ಕಾಲೇಜುಗಳ ಮುಖ್ಯಸ್ಥರಿಗೆ ಸಲ್ಲಿಸುವುದು.

10) ಸದರಿ ಹೊರ ಸಂಪನ್ಮೂಲ ಸಿಬ್ಬಂದಿಗಳ ಸೇವೆಯು ತಾತ್ಕಾಲಿಕವಾಗಿದ್ದು, ಸದರಿ ಹೊರಗುತ್ತಿಗೆ ಸಿಬ್ಬಂದಿಗಳು ಸರ್ಕಾರದ ಯಾವುದೇ ಸವಲತ್ತುಗಳಿಗೆ ಅರ್ಹರಿರುವುದಿಲ್ಲ.

11) ಹೊರ ಸಂಪನ್ಮೂಲ ಏಜೆನ್ಸಿಯು ಹೆಚ್ಚು ಅನುಭವವುಳ್ಳ ಸೇವಾ ಸಿಬ್ಬಂದಿಯನ್ನು ಇಲಾಖೆಗೆ ಒದಗಿಸಬೇಕು. ಈ ರೀತಿ ನೇಮಕಗೊಂಡ ಹೊರ ಸಂಪನ್ಮೂಲ ಸಿಬ್ಬಂದಿಯು ಇಲಾಖಾ ಅಧಿಕಾರಿಗಳ ವ್ಯಾಪ್ತಿಯಲ್ಲಿ ಅವರ ಮಾರ್ಗದರ್ಶನದಂತೆ ಸೇವೆ ಸಲ್ಲಿಸುವಂತಿರಬೇಕು.

12) ಹೊರ ಸಂಪನ್ಮೂಲ ಏಜೆನ್ಸಿಯು ಯಾವುದೇ ಕಾರಣಕ್ಕೂ ಪೂರ್ವಾನ್ವಯವಾಗಿ ಇಲಾಖಾ ಅಧಿಕಾರಿಗಳ ಗಮನಕ್ಕೆ ತರದೆ ತನ್ನ ಸಿಬ್ಬಂದಿಗಳನ್ನು ಹಿಂಪಡೆಯಬಾರದು. ಇದನ್ನು ಟೆಂಡರ್ ಷರತ್ತುಗಳ ಉಲ್ಲಂಘನೆ ಎಂದು ಪರಿಗಣಿಸಲಾಗುವುದು.

13) ಹೊರ ಸಂಪನ್ಮೂಲ ಸಿಬ್ಬಂದಿ ವರ್ಗದವರು ಪ್ರತಿ ತಿಂಗಳು 01 ದಿನ ಮಾತ್ರ ರಜೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. ಆದರೆ, ಲಭ್ಯವಿರುವ ರಜೆ ಅವಧಿಯನ್ನೂ ಮೀರಿ ಗೈರು ಹಾಜರಾದಲ್ಲಿ ಅವರ ವೇತನವನ್ನು ಕಡಿತಗೊಳಿಸಲಾಗುವುದು. ಒಂದು ವೇಳೆ ನಿರಂತರವಾಗಿ 15 ದಿನಗಳಿಗಿಂತ ಹೆಚ್ಚಿನ ಅವಧಿಗೆ ಗೈರು ಹಾಜರಾದಲ್ಲಿ / ರಜೆ ಪಡೆದಲ್ಲಿ ಬದಲಿ ಸಿಬ್ಬಂದಿಯ ವ್ಯವಸ್ಥೆಯನ್ನು ಮಾಡಬೇಕು.

.....4

14) ಟೆಂಡರ್ದಾರರು ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಒದಗಿಸುವ ಹೊರ ಸಂಪನ್ಮೂಲ ಸಿಬ್ಬಂದಿಗಳಿಗೆ ಸೇವಾ ಅವಧಿಯಲ್ಲಿ ಪ್ರಾಣಾಪಾಯ, ಆಕಸ್ಮಿಕ ಘಟನೆಗಳು ಸಂಭವಿಸಿದಲ್ಲಿ ಅದಕ್ಕೆ ಟೆಂಡರ್‌ದಾರರೇ ಹೊಣೆಗಾರರಾಗಿದ್ದು, ಸೂಕ್ತ ಪರಿಹಾರ ನೀಡಲು ಬದ್ಧರಾಗಿರುತ್ತಾರೆ. ಇಲಾಖೆಯು ಈ ಬಗ್ಗೆ ಯಾವುದೇ ಜವಾಬ್ದಾರಿ ಹೊಂದಿರುವುದಿಲ್ಲ ಹಾಗೂ ಹೊಣೆಗಾರರಾಗಿರುವುದಿಲ್ಲ.

15) ಟೆಂಡರ್ದಾರರು ಒದಗಿಸುವ ಹೊರ ಸಂಪನ್ಮೂಲ ಸಿಬ್ಬಂದಿಗಳು ಕಛೇರಿ/ಕಾಲೇಜಿನ ಚರ, ಸ್ಥಿರ ಆಸ್ತಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ನಷ್ಟ ಉಂಟು ಮಾಡಿದಲ್ಲಿ ಅದನ್ನು ಟೆಂಡರ್‌ದಾರರೇ ಭರಿಸಬೇಕಾಗುತ್ತದೆ.

16) ಹೊರ ಸಂಪನ್ಮೂಲ / ಹೊರಗುತ್ತಿಗೆ ಸಿಬ್ಬಂದಿಗಳನ್ನು ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಒದಗಿಸುವ ಸಂದರ್ಭದಲ್ಲಿ ಕನ್ನಡಿಗರಿಗೆ ಹಾಗೂ ಸ್ಥಳೀಯರಿಗೆ ಮೊದಲ ಆದ್ಯತೆ ನೀಡತಕ್ಕದ್ದು.

17) ಹೊರ ಸಂಪನ್ಮೂಲ ಸೇವಾ ಸಿಬ್ಬಂದಿಗಳು ಉತ್ತಮ ನಡತೆ ಹೊಂದಿರತಕ್ಕದ್ದು. ಕಛೇರಿ/ಕಾಲೇಜಿನ ಕರ್ತವ್ಯದ ಅವಧಿಯಲ್ಲಿ ಧೂಮಪಾನ ಹಾಗೂ ಮಧ್ಯಪಾನ ಮಾಡುವುದನ್ನು ನಿಷೇಧಿಸಿದೆ. ಒಂದು ವೇಳೆ ಅಂತಹ ಅಹಿತಕರ ಘಟನೆಗಳಲ್ಲಿ ತೊಡಗಿ, ಮುಜುಗರವಾಗುವಂತೆ ನಡೆದುಕೊಂಡಲ್ಲಿ ಅಂತಹ ಸೇವಾ ಸಿಬ್ಬಂದಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ಸೇವೆಯಿಂದ ತೆಗೆದುಹಾಕಲಾಗುವುದು.

18) ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹೊರ ಸಂಪನ್ಮೂಲದಿಂದ ಸೇವೆಯನ್ನು ಪಡೆಯಲಾಗುತ್ತಿದೆಯೇ ಹೊರತು, ಇದು ಖಾಯಂ ನೇಮಕಾತಿಯಾಗಿರುವುದಿಲ್ಲ ಹಾಗೂ ಸಂಪೂರ್ಣ ತಾತ್ಕಾಲಿಕವಾಗಿರುತ್ತದೆ.

19) ಟೆಂಡರ್ದಾರರು ತಮ್ಮ ಏಜೆನ್ಸಿಯಿಂದಲೇ ನೇರವಾಗಿ ಸಿಬ್ಬಂದಿಗಳ ಸೇವೆ ಒದಗಿಸಬೇಕು. ಟೆಂಡರ್ ಅಂಗೀಕೃತವಾದ ನಂತರ ಬೇರೆ ಏಜೆನ್ಸಿಗೆ ಈ ಕೆಲಸವನ್ನು ಒಳಗುತ್ತಿಗೆ ರೂಪದಲ್ಲಿ ವಹಿಸುವುದಾಗಲಿ ಅಥವಾ ಸಿಬ್ಬಂದಿಗಳ ನಿರ್ವಹಣೆ/ದಾಖಲಾತಿಗಳನ್ನು ಬೇರೆಯವರಿಂದ ಮಾಡಿಸುವುದಾಗಲಿ ಮಾಡಕೂಡದು.

20) ಟೆಂಡರ್ ಪ್ರಕಟಣೆಯಲ್ಲಿ ನೀಡಿದ ಹುದ್ದೆಗಳ ಸಂಖ್ಯೆ ತಾತ್ಕಾಲಿಕವಾಗಿದ್ದು, ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ ಹಾಗೂ ಟೆಂಡರ್ ಪ್ರಕಟಣೆಯಲ್ಲಿನ ಹುದ್ದೆಗಳಿಗೆ ಕಾರ್ಯಾದೇಶ ನೀಡುವ ಮತ್ತು ನೀಡದೇ ಇರುವ ಅಥವಾ ಪರಿಷ್ಕರಿಸುವ ಅಧಿಕಾರ ಟೆಂಡರ್ ಅಂಗೀಕಾರ ಪ್ರಾಧಿಕಾರಕ್ಕೆ ಇರುತ್ತದೆ.

21) ಕೇಂದ್ರ ಕಛೇರಿ, ಪ್ರಾದೇಶಿಕ ಕಛೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ನಿಯೋಜಿಸುವ ಗ್ರೂಪ್-ಡಿ ವೃಂದದ ಸಿಬ್ಬಂದಿಗಳು ಕಛೇರಿ/ಕಾಲೇಜುಗಳ ಸ್ವಚ್ಛತಾ ಕಾರ್ಯ, ಕೆಲವೆಡೆ ರಾತ್ರಿ ಕಾವಲುಗಾರರಾಗಿ ಕರ್ತವ್ಯ ನಿರ್ವಹಿಸಲು ಬದ್ಧರಾಗಿರತಕ್ಕದ್ದು ಹಾಗೂ ಸದರಿ ಕರ್ತವ್ಯವನ್ನು ನಿರ್ವಹಿಸತಕ್ಕದ್ದು. ಅಲ್ಲದೆ, ಇಲಾಖೆಯ ಮೇಲಾಧಿಕಾರಿಗಳು ಸೂಚಿಸುವ ಕಾರ್ಯಗಳನ್ನು ನಿರ್ವಹಿಸಲು ಬದ್ಧರಿರಬೇಕು.

.....5

22) ಸರ್ಕಾರ / ಕಾರ್ಮಿಕ ಇಲಾಖೆ / ಸಂಬಂಧಪಟ್ಟ ಇಲಾಖೆಯಿಂದ ಕಾಲ-ಕಾಲಕ್ಕೆ ನೀಡುವ ಆದೇಶಗಳಿಗೆ ಅನುಗುಣವಾಗಿ ಹೊರ ಸಂಪನ್ಮೂಲ ಸಿಬ್ಬಂದಿ ಸೇವೆಯನ್ನು ಒದಗಿಸಲು /ಹಿಂಪಡೆಯಲು ಟೆಂಡರ್‌ದಾರರು ಬದ್ಧರಿರಬೇಕು.

23) ಟೆಂಡರ್ ಸಮಿತಿಯು / ಸರ್ಕಾರವು ಕಾಲ-ಕಾಲಕ್ಕೆ ವಿಧಿಸುವ ನಿಬಂಧನೆಗಳಿಗೆ ಟೆಂಡರ್‌ದಾರರು ಬದ್ಧರಾಗಿಬೇಕು. ಟೆಂಡರ್‌ನಲ್ಲಿನ ಷರತ್ತುಗಳನ್ನು ಸಂದರ್ಭಾನುಸಾರ ಸಡಿಲಿಸುವ ಅಥವಾ ವಿಧಿಸುವ ಅಧಿಕಾರವು ಟೆಂಡರ್ ಅಂಗೀಕಾರ ಪ್ರಾಧಿಕಾರಕ್ಕೆ ಇರುತ್ತದೆ.

24) ಹೊರಸಂಪನ್ಮೂಲ ಸಿಬ್ಬಂದಿಗಳನ್ನು ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಯಾವುದೇ ಅಕ್ರಮಗಳು, ಅನ್ಯಾಯಗಳು ನಡೆದಿರುವುದು ಇಲಾಖೆಯ ಗಮನಕ್ಕೆ ಬಂದಲ್ಲಿ ಕೂಡಲೇ ಟೆಂಡರ್ ಅನ್ನು ರದ್ದುಗೊಳಿಸುವ ಅಧಿಕಾರ ಟೆಂಡರ್ ಅಂಗೀಕಾರ ಪ್ರಾಧಿಕಾರಕ್ಕೆ ಇರುತ್ತದೆ.

25) ಟೆಂಡರ್ ಆರ್.ಎಫ್.ಪಿ.ಯಲ್ಲಿ ನಮೂದಿಸಿರುವ ಎಲ್ಲಾ ನಿಬಂಧನೆಗಳಿಗೆ ಸರಬರಾಜುದಾರರು ಕಡ್ಡಾಯವಾಗಿ ಒಳಪಟ್ಟಿರುತ್ತಾರೆ.

ಮೇಲ್ಕಂಡ ಎಲ್ಲಾ ಷರತ್ತುಗಳನ್ನು ಪಾಲಿಸಲು ಅಂಗೀಕೃತ ಹೊರಸಂಪನ್ಮೂಲ ಏಜೆನ್ಸಿ (ಟೆಂಡರ್‌ದಾರರು) ಜವಾಬ್ದಾರರಾಗಿರತಕ್ಕದ್ದು.

**ಆಯುಕ್ತರು**
**ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

**ಶ್ರೀ.ಬಿ.ಎಸ್.ರಾಜಶೇಖರ್ ಬಿನ್ ಶ್ರೀ ಸಣ್ಣಬಸಪ್ಪ**
ಮಾಲೀಕರು, ಮೆ|| ಜೆಮಿನಿ ಸೆಕ್ಯೂರಿಟಿ ಮತ್ತು ಅಲೈಡ್ ಸರ್ವಿಸಸ್,
#2345/6, 5ನೇ ಕ್ರಾಸ್, ಹೆಚ್.ಕೆ.ಆರ್. ಸರ್ಕಲ್ ಹತ್ತಿರ,
ನಿಟ್ಟುವಳ್ಳಿ ಹೊಸ ಬಡಾವಣೆ,
ದಾವಣಗೆರೆ – 577 004.

<u>ಪ್ರತಿಯನ್ನು:</u>

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ಮಾಹಿತಿಗಾಗಿ
2) ಎಲ್ಲಾ ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3) ಸಂಬಂಧಪಟ್ಟ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
4) ರಕ್ಷಕ ಕಡತ
5) ಕಛೇರಿ ಪ್ರತಿ

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
ಗ್ರೂಪ್-ಡಿ ಸಿಬ್ಬಂದಿಗಳನ್ನು ಒದಗಿಸಬೇಕಾಗಿರುವ ಕಾಲೇಜುಗಳ ಪಟ್ಟಿ

| Sl. No. | Name of the college | Zone | Allotment |
|---|---|---|---|
| 1 | Head office, Bengaluru | A | 20 |
| 2 | Regional office, Bengaluru | A | 2 |
| 3 | Regional office, Mysore | A | 2 |
| 4 | Regional Office, Dharwad | A | 1 |
| 5 | Regional Office, Mangalore | A | 2 |
| 6 | Regional Office Shimoga | A | 2 |
| 7 | GAC Bengaluru | A | 2 |
| 8 | RCC Bengaluru | A | 1 |
| 9 | GFC, Vijayanagara, Bangalore | A | 2 |
| 10 | GFC Peenya, Bengaluru | A | 1 |
| 11 | GFC K.R.Puram, Bengaluru | A | 1 |
| 12 | GFC Varthur Bengaluru | A | 1 |
| 13 | GFC Hebbal, Bengaluru | A | 1 |
| 14 | GFC Frazertown Bengaluru | A | 1 |
| 15 | GFC Malleswaram Bengaluru | A | 2 |
| 16 | GFC Rajajinagara Bengaluru | A | 1 |
| 17 | GFC Kengeri, Bengaluru | A | 1 |
| 18 | GFC Yalahanka, Bengaluru | A | 2 |
| 19 | GCW Chamarajpete | A | 1 |
| 20 | GFC, Basavanagudi, Bangalore | A | 1 |
| 21 | GFC, Shantinagar, bangalore | A | 1 |
| 22 | GFC Dasarahalli, B,lore | C | 1 |
| 23 | GFC Hosakote | A | 1 |
| 24 | GFC Devanahalli | B | 2 |
| 25 | GFC Doddaballapur | A | 2 |
| 26 | GCW Doddaballapura | A | 1 |
| 27 | GFC Ramanagara | A | 1 |
| 28 | GLC Ramanagara (Law) | A | 1 |
| 29 | GFC Channapatna | A | 2 |
| 30 | GFC Kanakapura | A | 2 |
| 31 | GFC Bangarapete | B | 2 |
| 32 | GFC Malur | B | 2 |
| 33 | GFC Srinivasapura | B | 1 |
| 34 | GFC K.G.F., Kolar | A | 1 |
| 35 | GFC Bangaru Tirupathi (Bangarapete) | C | 1 |
| 36 | GFC Gowribidanur | B | 1 |
| 37 | GCB Chinthamani | A | 1 |
| 38 | GCW Chintamani | A | 2 |
| 39 | GFC Gudibande | B | 1 |
| 40 | GFC Bagepalli, Kolar | B | 1 |
| 41 | GFC Tumkur | A | 1 |
| 42 | GCW Tumkur | A | 1 |
| 43 | GFC Pavagada | B | 1 |
| 44 | GCW Pavagada | B | 1 |

| Sl. No. | Name of the college | Zone | Allotment |
|---|---|---|---|
| 45 | GFC Madhugiri | B | 2 |
| 46 | GFC Dandina Shivara, Turuvekere | C | 1 |
| 47 | GFC Bellavi | C | 1 |
| 48 | GFC Tiptur, Tumkur | A | 1 |
| 49 | GFC C.S.Pura Gubbi (T) | C | 1 |
| 50 | GFC Midigeshi, Madhugiri (T) | C | 1 |
| 51 | MWC&MC Mysore | A | 2 |
| 52 | GFC Kuvempunagar, Mysore | A | 2 |
| 53 | GFC K.R Nagar | B | 2 |
| 54 | GFC Saligrama | B | 1 |
| 55 | GFC Hunsur | B | 1 |
| 56 | GCW Hunsur | B | 1 |
| 57 | GFC Hanagodu (Hunsur) | C | 1 |
| 58 | GFC H D Kote | B | 1 |
| 59 | GFC Bannur | B | 1 |
| 60 | GFC Hullahalli (Nanjanagudu) | C | 1 |
| 61 | GFC Nanjanagudu , Mysore | B | 1 |
| 62 | GCW Byrapura | C | 1 |
| 63 | GFC Saraguru, H.D.Kote (T) | B | 1 |
| 64 | GFC Talakadu, T.Narasipura (T) | C | 1 |
| 65 | GFC Bettadapura, Periyapatna (T) | C | 1 |
| 66 | GCW Chamarajanagar | A | 1 |
| 67 | GFC Hanur | B | 1 |
| 68 | GFC Kabbahalli (Gundlupete) | C | 1 |
| 69 | GFC Gundlupete, Chamrajnagar | B | 2 |
| 70 | GFC Yalanduru, Chamrajnagar | B | 1 |
| 71 | GLC, Chamarajanagar | A | 1 |
| 72 | GFC Srirangapatna | B | 1 |
| 73 | GFC K.R Pete | B | 2 |
| 74 | GCW K.R Pete (Mandya) | B | 1 |
| 75 | GFC Malavalli | B | 1 |
| 76 | GCW Maddur | B | 1 |
| 77 | GFC Koppa (Maddur) | C | 1 |
| 78 | GFC Bharathinagar (Maddur) | C | 1 |
| 79 | GFC Pandavapura. Mandya | B | 1 |
| 80 | GFC Melukote (Pandavapura) | C | 1 |
| 81 | GAC Hassan | A | 2 |
| 82 | GSC Hassan | A | 2 |
| 83 | GCW Hassan | A | 2 |
| 84 | GCW Gandadakoti, Hassan | A | 2 |
| 85 | GFC Hassan (Home Science) | A | 1 |
| 86 | GLC Hassan (Law) | A | 1 |
| 87 | GFC Paduvalahippe | C | 2 |
| 88 | GFC Sakaleshpur | B | 1 |
| 89 | GLC Holenarasipura | B | 1 |
| 90 | GFC Konanur | C | 1 |
| 91 | GFC Halebeedu, Belur Taluk, Hassan | C | 1 |
| 92 | GFC Gandasi | C | 1 |

| Sl. No. | Name of the college | Zone | Allotment |
|---|---|---|---|
| 93 | GFC Banavara, Arasikere Taluk | C | 1 |
| 94 | GFC Channarayapatna | B | 1 |
| 95 | GFC Alur | B | 1 |
| 96 | GFC Udayapura, Chennarayapattana Taluk, Hassan | C | 1 |
| 97 | GFC Thiluvalli, Hanagal Taq | C | 1 |
| 98 | GFC Haveri | A | 1 |
| 99 | GFC Ranebennur, Haveri | A | 1 |
| 100 | GFC Sunakal Bidari, Ranebennur | C | 1 |
| 101 | GFC Chikkabasur (Byadagi) Haveri | C | 1 |
| 102 | GCW Haveri | A | 1 |
| 103 | GFC Gajendragad | B | 1 |
| 104 | GFC Naregal (Gadag) | B | 1 |
| 105 | GFC Nargund | B | 1 |
| 106 | GFC Shirahatti | B | 1 |
| 107 | GFC Mundargi | B | 1 |
| 108 | GFC Mulagunda (Gadag) | B | 1 |
| 109 | GFC Hulakoti, Gadag Dist | C | 1 |
| 110 | GCW Gadag | A | 1 |
| 111 | GFC Alnavar | B | 1 |
| 112 | GFC Dharwad | A | 2 |
| 113 | GCW Dharwad | A | 1 |
| 114 | GFC Kundagola, Dharwad | B | 1 |
| 115 | GFC Hubli | A | 1 |
| 116 | GFC Kalaghatagi, Dharwad | B | 1 |
| 117 | GFC Annigeri (Navalagunda) | B | 1 |
| 118 | GC Karwar | A | 1 |
| 119 | GFC Haliyal | B | 1 |
| 120 | GFC Mundagod | B | 1 |
| 121 | GFC Yallapura | B | 1 |
| 122 | GFC Joida, Uttar Kannada | B | 1 |
| 123 | GFC Bhatkala, Uttara Kannada | B | 1 |
| 124 | GFC Sirsi, Uttara Kannada | A | 2 |
| 125 | GFC Siddapura, Uttara Kannada | B | 2 |
| 126 | GFC Manki (Honnavara) | C | 1 |
| 127 | GFC Baada (Kumta) | C | 1 |
| 128 | GFC Kumta, Uttara Kannada | B | 1 |
| 129 | GFC Dhandeli | A | 1 |
| 130 | GCW Karwar (U.K) | A | 1 |
| 131 | GFC KK Koppa, Belgaum | C | 1 |
| 132 | GFC Nesargi | C | 1 |
| 133 | GCW Bylahongala | B | 1 |
| 134 | GFC Channammana Kittur, Bylahongala Taluk | B | 1 |
| 135 | GFC Inapur | B | 1 |
| 136 | GFC Athani, Belgaum | B | 2 |
| 137 | GFC Telasanga (Athani) | C | 1 |
| 138 | GFC Kokatanur, Katageri (Athani) | C | 1 |
| 139 | GFC Sadalga | B | 1 |
| 140 | GFC Chikkodi, Belgaum | B | 1 |

| Sl. No. | Name of the college | Zone | Allotment |
|---|---|---|---|
| 141 | GFC Rayabaga, Belgaum | B | 1 |
| 142 | GFC Yaragatti (Savadatti) | B | 1 |
| 143 | GFC Soudatti, Belgaum | B | 1 |
| 144 | GFC Pashchapura (Hukkeri) | C | 1 |
| 145 | GFC Hukkeri, Belgaum | B | 1 |
| 146 | GFC Ramadurga, Belgaum | B | 1 |
| 147 | GFC Mudalagi | B | 1 |
| 148 | GFC Gokak, Belgaum | A | 1 |
| 149 | GFC Beedi, Khanapura (T) | C | 1 |
| 150 | GCW Belgaum | A | 1 |
| 151 | GFC, Harogeri, raibagh (t) | C | 1 |
| 152 | GFC, Nippani, belgaum (D) | C | 1 |
| 153 | GFC Bagalkote | A | 2 |
| 154 | GFC Guledagudda | B | 1 |
| 155 | GFC Ilakal, Bagalkote | A | 1 |
| 156 | GFC Beelagi | B | 1 |
| 157 | GCW Jamakandi | A | 1 |
| 158 | GFC Savalagi | C | 1 |
| 159 | GFC Hunagunda, Bagalkote | B | 2 |
| 160 | GFC Badami, Bagalkote | B | 1 |
| 161 | GCW Bagalkote | A | 1 |
| 162 | GCW, Yadahalli, Mudhol (T) | C | 1 |
| 163 | GFC Bijapur | A | 2 |
| 164 | GCW Bijapur | A | 1 |
| 165 | GFC Mamadapura (Bijapur) | C | 1 |
| 166 | GFC Golasangi | C | 1 |
| 167 | GFC Basavanabagewadi, Bijapur | B | 1 |
| 168 | GFC Indi, Bijapur | B | 1 |
| 169 | GFC Muddebihala, Bijapur | B | 2 |
| 170 | GFC Managuli, Basavanabagevadi (T) | B | 1 |
| 171 | GFC Jalaki, Indi (T) | C | 1 |
| 172 | GFC Devarahipparagi, Sindhagi (T) | B | 1 |
| 173 | GFC Hebri | B | 1 |
| 174 | GFC Karkala | B | 1 |
| 175 | GFC Kundapura, Udupi | B | 1 |
| 176 | GFC Kaapu | B | 1 |
| 177 | GFC Udupi | A | 1 |
| 178 | GFC Barkur | C | 2 |
| 179 | GCW Udupi | A | 2 |
| 180 | GFC Kota-Padukere (Udupi) | C | 1 |
| 181 | GFC Hiriyadaka | C | 1 |
| 182 | GFC Uppinangady | C | 1 |
| 183 | GFC Vitla | B | 1 |
| 184 | GFC Punjalakatte (Belthangadi) | C | 1 |
| 185 | GFC Vamadapadavu | C | 1 |
| 186 | GFC Bellare | C | 1 |
| 187 | GFC Mangalore, Dakishna Kannadda | A | 2 |
| 188 | GFC Mudipu, Bantwala (T) | C | 1 |

| Sl. No. | Name of the college | Zone | Allotment |
|---|---|---|---|
| 189 | GFC Kanyana | C | 1 |
| 190 | GFC Madikeri, Kodagu | A | 1 |
| 191 | GFC Virajapete, Kodagu | B | 1 |
| 192 | GFC Somavarapet | B | 1 |
| 193 | GFC Shikaripura | B | 2 |
| 194 | GFC Shiralakoppa (Shikaripura) | B | 1 |
| 195 | GFC Hosanagara | B | 2 |
| 196 | GFC Soraba | B | 2 |
| 197 | GCW Sagara | A | 2 |
| 198 | GFC Tirthahalli, Shimoga | B | 2 |
| 199 | GFC Holehonnur | C | 1 |
| 200 | GFC Shimoga | A | 2 |
| 201 | GFC Ayanuru, Shimoga (T) | C | 1 |
| 202 | GCW Shimoga | A | 1 |
| 203 | GFC Koppa, Chickmagalur | B | 1 |
| 204 | GFC Kalasa, Chickmangalur | B | 1 |
| 205 | GFC Narasimharajapur | B | 1 |
| 206 | GFC Tarikere, Chickmangalur | B | 1 |
| 207 | GFC Kadur | B | 1 |
| 208 | GFC Yagati (Kadur) | C | 1 |
| 209 | GAC Chitradurga | A | 1 |
| 210 | GSC Chitradurga | A | 1 |
| 211 | GFC Challakere | A | 2 |
| 212 | GFC Parasuramapura | C | 1 |
| 213 | GFC Hosadurga | B | 1 |
| 214 | GFC Javanagondanahalli (Hiriyur) | C | 1 |
| 215 | Vani Sakka GFC Hiriyur | A | 1 |
| 216 | GFC Davanagere | A | 2 |
| 217 | GCW Davanagere | A | 2 |
| 218 | GFC Basavapattana | C | 1 |
| 219 | GFC Channagiri | B | 2 |
| 220 | GFC Nyamathi | B | 1 |
| 221 | GFC Honnali, Davangere | B | 2 |
| 222 | GFC Harihara, Davangere | A | 1 |
| 223 | GFC Jagaluru, Davangere | B | 1 |
| 224 | GFC Jewargi | B | 2 |
| 225 | GFC Sedam | B | 2 |
| 226 | GFC Kharjagi, Gulbarga | C | 1 |
| 227 | GFC Madana Hipparaga (Gulbarga) | C | 1 |
| 228 | GFC Sulepete (Gulbarga) | C | 1 |
| 229 | GLC Marthur | C | 1 |
| 230 | GFC Yadgiri | A | 1 |
| 231 | GFC Gurumitkal | B | 1 |
| 232 | GFC Shahapura | A | 2 |
| 233 | GFC Raichur | A | 1 |
| 234 | GFC Sindhanur | A | 2 |
| 235 | GFC Jalahalli (Deodurga) | C | 1 |
| 236 | GFC Lingasaguru, Raichur | B | 1 |

| Sl. No. | Name of the college | Zone | Allotment |
|---|---|---|---|
| 237 | GFC Turuvihala, Sindhanuru (T) | B | 1 |
| 238 | GFC Yelburga | B | 1 |
| 239 | GFC Koppala | A | 1 |
| 240 | GFC Hosabandi Aralapura, Koppal | C | 1 |
| 241 | GFC Irakalgada (Koppala) | C | 1 |
| 242 | GFC Alavandi (Koppala) | C | 1 |
| 243 | GFC Hitnal (Koppala) | C | 1 |
| 244 | GFC Mangalore, Yalburga (T) | C | 1 |
| 245 | GFC Kushtagi | B | 2 |
| 246 | GFC Gangavathi | A | 2 |
| 247 | GFC Sriramanagara (Koppala) | C | 1 |
| 248 | GFC Tavarageri, Kushtagi (T) | B | 1 |
| 249 | GFC Bellary City | A | 1 |
| 250 | GFC Kampli | B | 1 |
| 251 | GFC Siraguppa | A | 1 |
| 252 | GFC Harapanahalli, | B | 1 |
| 253 | GFC Hoovinahadagali, | B | 2 |
| 254 | GFC Kudligi | B | 1 |
| 255 | GFC Hagaribommonahalli | B | 2 |
| 256 | GFC Balki, Bidar | B | 1 |
| 257 | GFC Humnabad, Bidar | B | 1 |
| 258 | GFC Hulasoora (Basavakalyana) | B | 1 |
| 259 | GFC, Devarayasamudra, (Residential coll) | | 1 |
| 260 | GFC, Malladihalli, Holalkege (T) (Residential Coll) | | 1 |
| 261 | GFC, Yadapura, Chamarajanagar (T) (Residential Coll) | | 1 |
| 262 | GFC, Devagiri, Haveri (T) (Residential Coll) | | 1 |
| 263 | GFC, Hadalageri, Muddebihal (T) (Residential Coll) | | 1 |
| 264 | GFC, Gundepalli, Sedam (T) (Residential Coll) | | 1 |
| 265 | GFC, Kavitala, Manvi (T) (Residential Coll) | | 1 |
| 266 | GFC, Mudnal, Yadgiri (T) (Residential Coll) | | 1 |
| 267 | GFC, Talabala, Yelburga (T) (Residential Coll) | | 1 |
| 268 | GFC, Halahalli, Bidar (T) (Residential Coll) | | 1 |
| 269 | GFC, Haradanahalli, Holenarsipura (T)(Residnl Coll) | C | 1 |
| 270 | GFC, Ramanagara, (Residential Coll) | A | 1 |
| 271 | GOVT. Model Degree college, Raichur | | 1 |
| 272 | GOVT. Model Degree college, Shahapur | | 1 |
| Total | | | 347 |

ಮುಖ್ಯ ಆಡಳಿತಾಧಿಕಾರಿಗಳು (ಪ್ರ)
ಕಾಲೇಜು ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಒದಗಿಸಬೇಕಾಗಿರುವ ಕಾಲೇಜುಗಳ ಪಟ್ಟಿ

| Sl. No. | Name of the college | Zone | Allotment |
|---|---|---|---|
| 1 | Head office, Bengaluru | A | 10 |
| 2 | Regional office, Mysore | A | 1 |
| 3 | Regional Office, Dharwad | A | 1 |
| 4 | Regional Office, Gulbarga | A | 1 |
| 5 | RCC Bengaluru | A | 1 |
| 6 | GFC Ganganagar, Bengaluru | A | 1 |
| 7 | GFC Hebbal, B,lore) | C | 1 |
| 8 | GFC Frazertown Bengaluru | A | 1 |
| 9 | GFC Malleswaram Bengaluru | A | 1 |
| 10 | GFC Rajajinagara Bengaluru | A | 1 |
| 11 | GFC Devanahalli | B | 1 |
| 12 | GFC Ramanagara | A | 1 |
| 13 | GFC Channapatna | A | 1 |
| 14 | GFC Kanakapura | A | 1 |
| 15 | GFC Magadi | B | 1 |
| 16 | GCW Kolar | A | 1 |
| 17 | GFC Srinivasapura | B | 1 |
| 18 | GFC K.G.F., Kolar | A | 1 |
| 19 | GFC Gowribidanur | B | 1 |
| 20 | GFC Chikkaballapura | A | 1 |
| 21 | GCB Chinthamani | A | 1 |
| 22 | GCW Chintamani | A | 1 |
| 23 | GCW Tumkur | A | 1 |
| 24 | GFC Gubbi | B | 1 |
| 25 | GFC Kunigal | B | 1 |
| 26 | GFC Koratagere | B | 1 |
| 27 | GFC Pavagada | B | 1 |
| 28 | GFC Madhugiri | B | 1 |
| 29 | GFC Tiptur, Tumkur | A | 1 |
| 30 | MWAC Mysore | A | 1 |
| 31 | MWC&MC Mysore | A | 1 |
| 32 | MSCW Mysore | A | 1 |
| 33 | GFC Kuvempunagar, Mysore | A | 1 |
| 34 | GFC K.R Nagar | B | 1 |
| 35 | GFC K.R Nagar (Womens) | B | 1 |
| 36 | GFC Hunsur | B | 1 |
| 37 | GFC H D Kote | B | 1 |
| 38 | GFC T. Narasipura, Mysore | B | 1 |
| 39 | GFC Nanjanagudu , Mysore | B | 1 |
| 40 | GFC Gundlupete, Chamrajnagar | B | 1 |

| Sl. No. | Name of the college | Zone | Allotment |
|---|---|---|---|
| 41 | GC Mandya | A | 1 |
| 42 | GFC K.R Pete | B | 1 |
| 43 | GCW K.R Pete (Mandya) | B | 1 |
| 44 | GAC Hassan | A | 1 |
| 45 | GSC Hassan | A | 1 |
| 46 | GCW Hassan | A | 1 |
| 47 | GFC Paduvalahippe | C | 1 |
| 48 | GFC Channarayapatna | B | 1 |
| 49 | GFC Hirekerur | B | 1 |
| 50 | GC Karwar | A | 1 |
| 51 | GFC Mundagod | B | 1 |
| 52 | GFC Sirsi, Uttara Kannada | A | 1 |
| 53 | GFC Siddapura, Uttara Kannada | B | 1 |
| 54 | GFC Dhandeli | A | 1 |
| 55 | GFC Mudalagi | B | 1 |
| 56 | GFC Gokak, Belgaum | A | 1 |
| 57 | GFC Bagalkote | A | 1 |
| 58 | GCW Jamakandi | A | 1 |
| 59 | GFC Bijapur | A | 1 |
| 60 | GFC Sindagi, Bijapur | B | 1 |
| 61 | GFC Muddebihala, Bijapur | B | 1 |
| 62 | GFC Karkala | B | 1 |
| 63 | GFC Kundapura, Udupi | B | 1 |
| 64 | GFC Barkur | C | 1 |
| 65 | GFC Uppinangady | C | 1 |
| 66 | GFC Mangalore, Dakishna Kannadda | A | 1 |
| 67 | GFC Mangalore (Womens) | A | 1 |
| 68 | GFC Shikaripura | B | 1 |
| 69 | GFC Hosanagara | B | 1 |
| 70 | GFC Rippanpete, Shimoga Dist | C | 1 |
| 71 | GFC Soraba | B | 1 |
| 72 | GFC Tirthahalli, Shimoga | B | 1 |
| 73 | Sir MVGovt. Arts & Commerce College Bhadravathi | A | 1 |
| 74 | GFC Sagar | A | 1 |
| 75 | GFC Kadur | B | 1 |
| 76 | GSC Chitradurga | A | 1 |
| 77 | GFC Challakere | A | 1 |
| 78 | Vani Sakka GFC Hiriyur | A | 1 |
| 79 | GFC Davanagere | A | 1 |
| 80 | GCW Davanagere | A | 1 |
| 81 | GFC Honnali, Davangere | B | 1 |
| 82 | GFC Harihara, Davangere | A | 1 |
| 83 | GFC Jewargi | B | 1 |

| Sl. No. | Name of the college | Zone | Allotment |
|---|---|---|---|
| 84 | GFC Chittapur | B | 1 |
| 85 | GFC Sedam | B | 1 |
| 86 | GFC Yadgiri | A | 1 |
| 87 | GFC Raichur | A | 1 |
| 88 | GFC Yelburga | B | 1 |
| 89 | GCW Koppal | A | 1 |
| 90 | GFC Kudligi | B | 1 |
| 91 | GFC Siraguppa | A | 1 |
| 92 | GFC Bidar | A | 1 |
| 93 | GFC Humnabad, Bidar | B | 1 |
| TOTAL | | | 102 |

ಮುಖ್ಯ ಆಡಳಿತಾಧಿಕಾರಿಗಳು (ಪ್ರ)
ಕಾಲೇಜು ಶಿಕ್ಷಣ ಇಲಾಖೆ